# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಅ-1/ಸು/52/2023-26

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನಸೌಧ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560 001, ದಿನಾಂಕ:18.07.2026.

## ಸುತ್ತೋಲೆ

ವಿಷಯ: ಕಛೇರಿಗಳಲ್ಲಿ ಆಗುವ ನೀರು ಮತ್ತು ವಿದ್ಯುತ್ ಅಪವ್ಯಯವನ್ನು ತಡೆಗಟ್ಟುವ ಕುರಿತು.

ಉಲ್ಲೇಖ: (1) ಸುತ್ತೋಲೆ ಸಂಖ್ಯೆ:ಸಿಆಸುಇ/89/ಡಿಇವಿ/2019, ದಿ:21.02.2022.
(2) ಸುತ್ತೋಲೆ ಸಂಖ್ಯೆ:ಸಿಆಸುಇ/70/ಡಿಬಿಎಂ/2026, ದಿ:16.07.2026.

* * *

ಸರ್ಕಾರಿ ಕಛೇರಿಗಳಲ್ಲಿ ಆಗುವ ನೀರು ಮತ್ತು ವಿದ್ಯುತ್ ಅಪವ್ಯಯವನ್ನು ತಡೆಗಟ್ಟುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುತ್ತಾರೆ.

ಅದರಂತೆ, ಈ ಸಚಿವಾಲಯದ ವ್ಯಾಪ್ತಿಗೆ ಒಳಪಡುವ ವಿಧಾನಸೌಧ ಹಾಗೂ ಶಾಸಕರ ಭವನದ ಕಛೇರಿಗಳಲ್ಲಿ ಅಧಿಕಾರಿ/ಸಿಬ್ಬಂದಿಗಳು ಕಛೇರಿಯಲ್ಲಿ ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲ ಮತ್ತು ಜೀವಜಲವಾದ ನೀರನ್ನು ಉಪಯೋಗಿಸುವಾಗ ಆದಷ್ಟು ಎಚ್ಚರಿಕೆಯನ್ನು ವಹಿಸಬೇಕೆಂದು ಹಾಗೂ ಕಛೇರಿಯ ವೇಳೆಯಲ್ಲಿ ವಿದ್ಯುತ್ ಬಳಕೆಯನ್ನು ನಿಯಂತ್ರಣಗೊಳಿಸಬೇಕೆಂದು ಹಾಗೂ ಕಛೇರಿ ವೇಳೆಯ ನಂತರ ವಿದ್ಯುತ್ ದೀಪ, ಫ್ಯಾನ್, ಗಣಕಯಂತ್ರ ಹಾಗೂ ಹವಾ ನಿಯಂತ್ರಣ ಸಾಧನಗಳನ್ನು ಸ್ಥಗಿತಗೊಳಿಸದಿದ್ದಲ್ಲಿ, ನವೀಕರಿಸಲಾಗದಂತಹ ಅತ್ಯಂತ ಮಹತ್ವದ ಸಂಪನ್ಮೂಲವಾದ ಅನಪೇಕ್ಷಿತವಾಗಿ ಅಪವ್ಯಯಗೊಳಿಸದಂತೆ ಉಳಿತಾಯ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ.

ಆದುದರಿಂದ, ಇನ್ನು ಮುಂದೆ ವಿಧಾನ ಪರಿಷತ್ತಿನ ಎಲ್ಲಾ ಶಾಖೆಗಳಲ್ಲಿ (ಶಾಸಕರ ಭವನವೂ ಸೇರಿದಂತೆ) ಹಾಗೂ ಅಧಿಕಾರಿಗಳ ಕೊಠಡಿ/ಉಪ ಕೊಠಡಿಗಳಲ್ಲಿ ಅಧಿಕಾರಿಗಳು/ಸಿಬ್ಬಂದಿಗಳು ಇಲ್ಲದ ವೇಳೆಯಲ್ಲಿ, ಸಭೆ/ಸಮಾರಂಭಗಳಲ್ಲಿ ಹಾಗೂ ಕಛೇರಿ ವೇಳೆ ಮುಕ್ತಾಯವಾದ ನಂತರ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಯು ವಿದ್ಯುತ್ ಸಂಪರ್ಕದ ಎಲ್ಲಾ ಸ್ವಿಚ್‌ಗಳನ್ನು ಕಡ್ಡಾಯವಾಗಿ ಸ್ಥಗಿತಗೊಳಿಸಿ ಅಮೂಲ್ಯವಾದ ವಿದ್ಯುತ್ ಪೋಲಾಗುವುದನ್ನು ತಡೆಗಟ್ಟಲು ಹಾಗೂ ನಲ್ಲಿಗಳನ್ನು ಸರಿಯಾಗಿ ನಿಲ್ಲಿಸಿ ನೀರನ್ನು ಮಿತವಾಗಿ ಬಳಸಲು ಹಾಗೂ ನೈಸರ್ಗಿಕವಾದ ಗಾಳಿ, ಬೆಳಕನ್ನು ಉಪಯೋಗಿಸುವುದರ ಜೊತೆಗೆ ಈ ಕೆಳಕಂಡ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

01. ಈ ಸಚಿವಾಲಯದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನೈಸರ್ಗಿಕ ಬೆಳಕನ್ನು ಬಳಸುವುದು ಹಾಗೂ ಅನಗತ್ಯವಾಗಿ ವಿದ್ಯುತ್ ದೀಪಗಳನ್ನು ಮತ್ತು ಫ್ಯಾನ್‌ಗಳನ್ನು ಬಳಸಬಾರದು. ಅಧಿಕಾರಿಗಳ ಕೊಠಡಿಗಳಲ್ಲಿ/ಶಾಖೆಗಳಲ್ಲಿ ಕಿಟಕಿಗಳನ್ನು ಪೂರ್ತಿ ತೆರೆದಿಡಬೇಕು. ವಿಧಾನ ಪರಿಷತ್ತಿನ ಪ್ರತಿಯೊಂದು ಮಹಡಿಯಲ್ಲಿ ಹಾಗೂ ಶಾಸಕರ ಭವನದ ಆವರಣಗಳಲ್ಲಿ ಕಾವಲುಗಾರರು ಸಂಜೆ 6.00 ಗಂಟೆಯ ನಂತರ ವಿದ್ಯುತ್ ದೀಪಗಳನ್ನು ಬೆಳಗಿಸಲಾಗಿದೆಯೇ ಹಾಗೂ ಬೆಳಗ್ಗೆ 6.00 ಗಂಟೆಗೆ ವಿದ್ಯುತ್ ದೀಪಗಳನ್ನು ನಂದಿಸಲಾಗಿದೆಯೇ ಎಂದು ದಂಡನಾಯಕರು ಮೇಲ್ವಿಚಾರಣೆ ಮಾಡುವುದು.



Scanned with OKEN Scanner

02. ಮಾನ್ಯ ಪೀಠಾಸೀನಾಧಿಕಾರಿಗಳ/ಸಂಸದೀಯ ಪದಾಧಿಕಾರಿಗಳು/ಅಧಿಕಾರಿಗಳು ಕಛೇರಿಯಲ್ಲಿ ಇಲ್ಲದ ಸಮಯದಲ್ಲಿ ಆ ಕೊಠಡಿಗಳಲ್ಲಿ ವಿದ್ಯುತ್ ದೀಪಗಳನ್ನು ಫ್ಯಾನ್‌ಗಳನ್ನು ಹಾಕಬಾರದು. ಕಛೇರಿ ವೇಳೆ ಮುಕ್ತಾಯವಾದ ನಂತರ ವಿದ್ಯುತ್ ದೀಪಗಳ ಸ್ವಿಚ್‌ಗಳನ್ನು ಕಡ್ಡಾಯವಾಗಿ ಸ್ವಿಚ್-ಆಫ್ ಮಾಡುವ ಬಗ್ಗೆ "ಡಿ" ದರ್ಜೆ ನೌಕರರು ಮತ್ತು ಕಾವಲುಗಾರರಿಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಸೂಚನೆಗಳನ್ನು ನೀಡುವುದು. ವಿದ್ಯುತ್ ಮತ್ತು ನೀರಿನ ಅಪವ್ಯಯವಾಗದಂತೆ ವಿಧಾನ ಪರಿಷತ್ತಿನ ಕಾರ್ಯಕಾರಿ ಶಾಖೆಯ ಅಧಿಕಾರಿಗಳು ಮೇಲ್ವಿಚಾರಣೆ ಮಾಡುವುದು. ಈ ಕುರಿತು ಆಗಿಂದ್ದಾಗ್ಗೆ ಕಾರ್ಯದರ್ಶಿ(ಪ್ರ), ಕವಿಪ ಇವರಿಗೆ ವರದಿ ಸಲ್ಲಿಸುವುದು.

03. ಕಛೇರಿಯನ್ನು ಬೀಗ ಹಾಕುವ ಮುನ್ನ ಮತ್ತೊಮ್ಮೆ ಪರಿಶೀಲಿಸಿ ಸಂಬಂಧಿಸಿದ ವಿದ್ಯುತ್ ಉಪಕರಣಗಳನ್ನು ಸ್ಥಗಿತಗೊಳಿಸಿ ಬೀಗ ಹಾಕುವಂತೆ ಸಂಬಂಧಿಸಿದ ಭದ್ರತಾ ಸಿಬ್ಬಂದಿಗಳಿಗೆ ದಂಡನಾಯಕರು ನಿರ್ದೇಶನ ನೀಡುವುದು.

04. ಅಧಿಕಾರಿಗಳಿಗೆ ಮಾತ್ರ ಮೀಸಲಾದ ಕೊಠಡಿ/ಉಪ ಕೊಠಡಿ (Anti Chamber) ಗಳಲ್ಲಿನ ವಿದ್ಯುತ್ ಸಂಪರ್ಕಗಳನ್ನು ಒಂದೇ ಸ್ವಿಚ್‌ನ ಮೂಲಕ ಸ್ಥಗಿತಗೊಳಿಸಲು ಅಗತ್ಯ ಕ್ರಮ ವಹಿಸುವುದು.

05. ಸಂಜೆ ಕಛೇರಿಯಿಂದ ತಡವಾಗಿ ನಿರ್ಗಮಿಸುವ ಅಧಿಕಾರಿ/ನೌಕರರುಗಳು ವಿದ್ಯುತ್ ದೀಪಗಳು ಹಾಗೂ ಫ್ಯಾನ್‌ಗಳನ್ನು ಆರಿಸಿದ ನಂತರವೇ ಕೊಠಡಿಗಳಿಗೆ ಬೀಗ ಹಾಕುವ ಬಗ್ಗೆ ಸಂಬಂಧಪಟ್ಟವರಿಗೆ ಸಲಹೆಯನ್ನು ನೀಡಬೇಕು.

06. ಕಛೇರಿಗಳಲ್ಲಿ ಉಪಯೋಗಿಸಲಾಗುವ ಚಾರ್ಜರ್‌ಗಳು ಮತ್ತು ವಿದ್ಯುತ್ ಸಾಧನಗಳನ್ನು ಬಳಕೆಯ ನಂತರ ಬೇರ್ಪಡಿಸುವುದು.

07. ಒಂದು ವೇಳೆ ಅಧಿಕಾರಿಗಳ ಕಛೇರಿಗಳಲ್ಲಿ ನಿಯಮಾನುಸಾರ ಅಳವಡಿಸಲಾಗಿರುವ ಏರ್ ಕಂಡೀಷನರ್‌ಗಳನ್ನು 24–26C ತಾಪಮಾನದಲ್ಲಿ ಬಳಕೆ ಮಾಡಲು ಕ್ರಮವಹಿಸುವುದು.

08. ಸಭಾಂಗಣ ಕೊಠಡಿಗಳಲ್ಲಿ ಸಭೆ ನಡೆಯುವ ಮುನ್ನ ಸಭೆ ತಯಾರಿಯ ಸಮಯದಲ್ಲಿ ಆದಷ್ಟು ಕಡಿಮೆ ವಿದ್ಯುತ್ ದೀಪಗಳನ್ನು ಉಪಯೋಗಿಸುವುದು ಮತ್ತು ಸಭೆ ಮುಗಿದ ನಂತರ ಅಗತ್ಯವಿರುವ ವಿದ್ಯುತ್ ದೀಪಗಳನ್ನು ಹೊರತುಪಡಿಸಿ, ಉಳಿದ ವಿದ್ಯುತ್ ದೀಪಗಳನ್ನು ಸ್ಥಗಿತಗೊಳಿಸುವುದು. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಮೇಲ್ವಿಚಾರಣೆ ಮಾಡುವುದು.

09. ಕಛೇರಿಯ ಹಾಗೂ ಎಲ್ಲಾ ಶೌಚಾಲಯಗಳಲ್ಲಿ ಅನಗತ್ಯವಾಗಿ ನೀರು ಪೋಲಾಗುವುದನ್ನು ತಪ್ಪಿಸಲು, ಉಪಯೋಗದ ನಂತರ ಕಡ್ಡಾಯವಾಗಿ ನಲ್ಲಿಯನ್ನು ನಿಲ್ಲಿಸಿ, ನೀರು ಪೋಲಾಗುವುದನ್ನು ತಪ್ಪಿಸುವುದು. ಒಂದು ವೇಳೆ ಶೌಚಾಲಯಗಳಲ್ಲಿನ ಉಪಕರಣಗಳ ದುರಸ್ಥಿಯಿಂದ ನೀರು ಪೋಲಾಗುತ್ತಿರುವ ಅಂಶಗಳು ಕಂಡು ಬಂದಲ್ಲಿ ಕಾರ್ಯಕಾರಿ ಶಾಖೆಯ ಅಧಿಕಾರಿಗಳು ಲೋಕೋಪಯೋಗಿ ಇಲಾಖೆ (ಕಟ್ಟಡಗಳು) ಇವರ ಗಮನಕ್ಕೆ ತರುವುದು.



Scanned with OKEN Scanner

10. ಕಛೇರಿಗಳಲ್ಲಿ ಎಲ್ಲಾ ನಲ್ಲಿಗಳಿಗೆ (Taps) ನೀರಿನ ಹರಿವಿನ ಪ್ರಮಾಣ ಕಡಿಮೆ ಮಾಡಲು Water Aeratorsಗಳನ್ನು ಅಳವಡಿಸಲು ಕಾರ್ಯಕಾರಿ ಶಾಖೆಯ ಅಧಿಕಾರಿಗಳು ಲೋಕೋಪಯೋಗಿ ಇಲಾಖೆಯಿಂದ ಅಳವಡಿಸಲು ಕ್ರಮವಹಿಸುವುದು.
11. ಕಛೇರಿಗಳಲ್ಲಿ ಸಾಂಪ್ರದಾಯಿಕ ವಿದ್ಯುತ್ ದೀಪಗಳ ಬದಲಾಗಿ ಕಡಿಮೆ ವಿದ್ಯುತ್ ಬಳಸುವ ಮತ್ತು ದೀರ್ಘಕಾಲ ಬಾಳಿಕೆ ಬರುವ ಎಲ್‌ಇಡಿ ದೀಪಗಳನ್ನು ಅಳವಡಿಸಲು ಕ್ರಮವಹಿಸುವುದು.
12. ಕಛೇರಿಗಳಲ್ಲಿ ಯಾರೂ ಇಲ್ಲದ ಸಮಯದಲ್ಲಿ ದೀಪಗಳು ತಾವಾಗಿಯೇ ಆಫ್ (Off) ಆಗುವಂತೆ ಮಾಡಲು ಕಾರಿಡಾರ್‌ಗಳು, ವಿಶ್ರಾಂತಿ ಕೊಠಡಿಗಳು (Rest Room) ಮತ್ತು ಸಭಾಂಗಣ (Motion Censors)ಗಳಲ್ಲಿ ಅಳವಡಿಸಲು ಕಾರ್ಯಕಾರಿ ಶಾಖೆಯ ಅಧಿಕಾರಿಗಳು ಕ್ರಮವಹಿಸುವುದು.

18/7/2016

(ಕುಸ್ತುರ್ ಉನ್ನೀಸ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ:

**ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ (ಶಾಸಕರ ಭವನವೂ ಸೇರಿದಂತೆ)**

<u>ಪ್ರತಿಗಳು:</u>

01. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
02. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕವಿಪ.
03. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
04. ಮಾನ್ಯ ಸರ್ಕಾರಿ ಮುಖ್ಯ ಸಚೇತರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
05. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
06. ಕಾರ್ಯದರ್ಶಿ(ಪ್ರ)ರವರ ಪತ್ರಾಂಕಿತ ಆಪ್ತ ಸಹಾಯಕರಿಗೆ ಕವಿಪ.
07. **ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಕಾರ್ಯಕಾರಿ ಶಾಖೆ, ಕವಿಪ.**
08. **ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ.**
09. **ದಂಡನಾಯಕರು, ಕವಿಪ.**
10. ಸಂಬಂಧಪಟ್ಟ ಕಡತಕ್ಕೆ/ಸೂಚನಾ ಫಲಕಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು.

Scanned with OKEN Scanner